

‘ನಿಮ್ಮ ಪ್ರಿಯಕರ ಬರುವ ಹಾದಿ ಬದಲಾಗದಿರಲಿ’ ಎಂದು.

ಅಂದು ರಾಜ ಮಾವನ್ ಕಿಲ್ಲೆ ತನ್ನ ಪರಿವಾರದೊಡನೆ ಕುದುರೆಯೇರಿ ಇಡೀ ನಗರವನ್ನು ಸುತ್ತುತ್ತಾ ಬರುತ್ತಿದ್ದ. ಜನರ ಸಂತೋಷ, ಸಂಭ್ರಮಗಳನ್ನು ನೋಡಿ ಅವನ ಮನಸ್ಸು ಹಿಗ್ಗಿಹೋಗಿತ್ತು. ನಗರದ ಹೊರಭಾಗಕ್ಕೆ ಬಂದ. ಅಲ್ಲಿದ್ದ ವಿಹಾರದ ಮುಂದೆ ಜನ ಗುಂಪಾಗಿ ಮುತ್ತಿದ್ದರು. ವಿಹಾರದ ಒಳಗಡೆ ಮತ್ತು ಕೆಲವರು ಅಲ್ಲೇ ಮರಗಳ ನೆರಳಿನಲ್ಲಿ ಕುಳಿತು ಊಟ ಮಾಡುತ್ತಿದ್ದರು. ಎಲ್ಲರ ಮುಖದ ಮೇಲೂ ಸಂತೃಪ್ತಿ ಮನೆಮಾಡಿತ್ತು.

ರಾಜನಿಗೆ ಕುತೂಹಲವಾಯಿತು. ಪಕ್ಕದಲ್ಲೇ ಇದ್ದ ದಂಡಾಧಿಕಾರಿಯನ್ನು, ‘ಇಷ್ಟೊಂದು ಜನ ಇಲ್ಲಿ ಏಕೆ ನೆರೆದಿದ್ದಾರೆ? ಏನು ನಡೆಯುತ್ತಿದೆ ಇಲ್ಲಿ?’ ಎಂದು ಕೇಳಿದ.

‘ರಾಜನ್, ಇವರೆಲ್ಲರೂ ಒಂದು ಹೊತ್ತಿಗೂ ಅನ್ನವಿಲ್ಲದ ಬಡವರು. ಈ ವಿಹಾರಕ್ಕೆ ಬಂದವರಿಗೆಲ್ಲಾ ಹೊಟ್ಟೆ ತುಂಬಾ ಅನ್ನ ನೀಡಲಾಗುತ್ತದೆ, ಜೊತೆಗೆ ಇವರಿಗೆ ಸನ್ಮಾರ್ಗದಲ್ಲಿ ನಡೆಯುವ ಧಮ್ಮ ಬೋಧನೆಯನ್ನೂ ಮಾಡಲಾಗುತ್ತದೆ. ಅದಕ್ಕೆ ಇಲ್ಲಿ ವರುಷೊಂಬತ್ತು ಕಾಲವ್ರೂ ಜನ ಹೀಗೆಯೇ ತುಂಬಿರುತ್ತಾರೆ. ಕೇವಲ ನಮ್ಮ ರಾಜ್ಯದವರಷ್ಟೇ ಅಲ್ಲ ಪ್ರಭು, ನೆರೆ-ಹೊರೆ ರಾಜ್ಯದ ಬಡವರೂ ಈ ವಿಹಾರಕ್ಕೆ ಬರುತ್ತಾರೆ’

‘ದಿನವ್ರೂ ಹೀಗೆ ಇಲ್ಲಿ ಅನ್ನ ನೀಡುತ್ತಿರುವವರು ಯಾರು?’ ರಾಜ ಕುತೂಹಲದಿಂದ ಪ್ರಶ್ನಿಸಿದ.

‘ದೊರೆಯೇ, ಈ ವಿಹಾರದಲ್ಲಿ ಒಬ್ಬಳು ಬೌದ್ಧ ಸನ್ಯಾಸಿನಿ ಇದ್ದಾಳೆ. ಅವಳ ಹೆಸರು ಮಣಿಮೇಕಲೆ. ತನ್ನಲ್ಲಿರುವ ಅಕ್ಷಯ ಪಾತ್ರೆಯಿಂದ ಎಲ್ಲರಿಗೂ ಅನ್ನ ನೀಡುತ್ತಿದ್ದಾಳೆ. ಎಲ್ಲರೊಂದಿಗೂ ದಯೆ, ಕರುಣೆ, ಮೈತ್ರಿಯಿಂದ ವರ್ತಿಸುತ್ತಾಳೆ. ಕಲಹ-ತರ್ಕ-ವಾದಗಳಿಂದ ಸದಾ ದೂರವಿರುತ್ತಾಳೆ. ಅವಳಿಂದಾಗಿ ನಮ್ಮ ನಗರದಲ್ಲಿ ಈಗ ಹಸಿದವರೇ ಇಲ್ಲ!’